# ಹಿನ್ನೀರಿನ ಸುಂದರಿಯರು





**ಹರಿಯುವ ನೀರು, ಮಳೆ, ಬಿಸಿಲಿಗೆ ಜರ್ಜರಿತಗೊಂಡ ಮರಗಳು ವಿವಿಧ ಆಕಾರಗಳಲ್ಲಿ ಕೊಲಾಜ್ ಕಲಾಕೃತಿಗಳು!**

■ **ಸುನೀಲ್ ಬಾರ್ಕೂರ್**
ಚಿತ್ರಗಳು: ಹರೀಶ ಕೂಳೂರು/ಬೈಯಣ್ಣ ಆರ್.

ದೇಶದಲ್ಲೇ ಅತ್ಯಂತ ವೈವಿಧ್ಯಮಯ ಮತ್ತು ಅಪರೂಪದ ಜೀವಸಂಕುಲ ಹೊಂದಿರುವ ಕಾಳಿ ನದಿ ಉತ್ತಮ ಪ್ರವಾಸಿ ತಾಣ.

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಡಿಗ್ಗಿ ಕುಶಾವಳಿ ಎಂಬಲ್ಲಿ ಉಗಮಿಸಿ ಕಾರವಾರದ ಸದಾಶಿವಗಡದಲ್ಲಿ ಅರಬ್ಬಿ ಸಮುದ್ರಕ್ಕೆ ಸೇರುವವರೆಗೂ ಅದು ಕ್ರಮಿಸುವುದು ಒಟ್ಟು 184 ಕಿ.ಮೀ ಹರಿವು.

ತನ್ನ ಹಾದಿಗುಂಟ ಐದು ಅಣೆಕಟ್ಟುಗಳು, ಒಂದು ಅಣು ಸ್ಥಾವರ, ಒಂದು ಹುಲಿ ಸಂರಕ್ಷಿತ ವನ್ಯಧಾಮ, ಸಂರಕ್ಷಿತ ಅರಣ್ಯ ಪ್ರದೇಶವನ್ನು ಹೊಂದಿರುವುದು ಇದರ ವಿಶೇಷತೆ. ದೇಶ, ವಿದೇಶದ ಪ್ರವಾಸಿಗರು ಇಲ್ಲಿರುವ ಹಿನ್ನೀರಿನ ಅಪೂರ್ವ ಸೌಂದರ್ಯ ತಾಣಗಳನ್ನು ಹಾಗೂ ಜೀವವೈವಿಧ್ಯದ ತಾಣಗಳನ್ನು ವೀಕ್ಷಿಸಿ ಬೆರಗಾಗುತ್ತಾರೆ.

ಕಾಳಿ ತೀರ ಕರ್ನಾಟಕದಲ್ಲೇ ಅತ್ಯಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲೊಂದು. ತನ್ನ ಕಪ್ಪು ಬಣ್ಣದ ಕಾರಣದಿಂದಲೇ ಕಾಳಿ ಹೆಸರು ಬಂದಿದೆ ಎನ್ನುತ್ತಾರೆ. ಸುತ್ತ ಹಬ್ಬಿರುವ ಹಸಿರು ಜೀವರಾಶಿಯ ಬಹುದೊಡ್ಡ ಭಾಗವೊಂದು ಅಣೆಕಟ್ಟುಗಳ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ. ಮರಗಳು ಬೋಳಾಗಿ ಪಳೆಯುಳಿಕೆಯಂತಾಗಿವೆ. ಅಲ್ಲಲ್ಲಿ ಹೊರಚಾಚಿಕೊಂಡು ತಮ್ಮ ಅಸ್ತಿತ್ವವನ್ನು ಸಾರುತ್ತಿವೆ.

ಹರಿಯುವ ನೀರಿಗೆ, ಮಳೆ ಬಿಸಿಲಿಗೆ ಜರ್ಜರಿತಗೊಂಡು ವಿವಿಧ ಆಕಾರಗಳಾಗಿ ಮಾರ್ಪಟ್ಟು ಅಪೂರ್ವ ಕಲಾಕೃತಿಯಂತೆ ಕಾಣಿಸಿ ಇಡೀ ಪ್ರದೇಶದ ಸೌಂದರ್ಯವನ್ನು ಇಮ್ಮಡಿಸಿವೆ. ಸೂರ್ಯೋದಯ ಮತ್ತು ಸೂರ್ಯಾಸ್ತದ ವೇಳೆಯಂತೂ ಇಡೀ ಪ್ರದೇಶಕ್ಕೆ ಚಿನ್ನದಂಥ ಮೆರುಗಿರುತ್ತದೆ.

ಎಲೆಗಳೆಲ್ಲ ಉದುರಿ ದೇಹವೇ ಜರ್ಜರಿತವಾಗಿದ್ದರೂ ಅನೇಕ ಪಕ್ಷಿಗಳಿಗೆ ಈ ಮರಗಳೇ ಸೂರು!